ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.

ಸಿಸಿ ನಂ.791/2022

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್ ಠಾಣೆ

-ಃ ವಿರುದ್ಧ ಃ-

ಆರೋಪಿ ನಂ 1ಃ ಖಂಡಪ್ಪಾ ತಂದೆ ಸಿದ್ದಣ್ಣಾ ಪೂಜಾರಿ (ರಾವುರ್),
ವಃ 23 ವರ್ಷ, ಉಃ ಕಾರ ಚಾಲಕ,
ಸಾಃ ಮೈಲ್ವಾರ ಗ್ರಾಮ , ತಾಃ ಸೇಡಂ .

2. ಸೂರಮ್ಮ ಗಂಡ ಸಿದ್ದಣ್ಣಾ ಪೂಜಾರಿ (ರಾವುರ್),
ವಃ 55 ವರ್ಷ, ಉಃ ಮನೆ ಕೆಲಸ,
ಸಾಃ ಮೈಲ್ವಾರ ಗ್ರಾಮ,

3. ಸಿದ್ದಣ್ಣಾ ತಂದೆ ಸಾಬಣ್ಣ ಪೂಜಾರಿ (ರಾವುರ್),
ವಃ 65 ವರ್ಷ, ಉಃ ಒಕ್ಕಲುತನ,
ಸಾಃ ಮೈಲ್ವಾರ ಗ್ರಾಮ.

4. ಮಹೇಶ @ ಮಲ್ಲಿನಾಥ ತಂದೆ ಸಿದ್ದಣ್ಣ ಪೂಜಾರಿ (ರಾವುರ ),
ವಃ 30 ವರ್ಷ, ಉಃ ಒಕ್ಕಲುತನ,
ಸಾಃ ಮೈಲ್ವಾರ ಗ್ರಾಮ, ತಾಃ ಸೇಡಂ.

5. ಸುನೀತಾ ಗಂಡ ಮಹೇಶ @ ಮಲ್ಲಿನಾಥ ಪೂಜಾರಿ,
ವಃ 25 ವರ್ಷ, ಉಃ ಮನೆ ಕೆಲಸ,
ಸಾಃ ಮೈಲ್ವಾರ ಗ್ರಾಮ, ತಾಃ ಸೇಡಂ.

----

ದೋಷಾರೋಪಣೆ

ನಾನು ಶ್ರೀ ಲಲಿತಾ ಕುದರಿಮತಿ, ಬಿ.ಕಾಂ.,ಎಲ್‌ಎಲ್‌ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 20.12.2021 ರಂದು ಮುಂಜಾನೆ 10.30 ಗಂಟೆ ಸುಮಾರಿಗೆ ಸೇಡಂ ಪೊಲೀಸ ಠಾಣೆಯ ಹದ್ದಿಯಲ್ಲಿರುವ ಮೈಲ್ವಾರ ಗ್ರಾಮದಲ್ಲಿ ಆರೋಪಿ ನಂ 1 ರಿಂದ 5 ರವರೆಗಿನವರು ಅಕ್ರಮಕೂಟ ರಚಿಸಿಕೊಂಡು ಚಾಸಾ ನಂ 1 ನೇದ್ದವಳಿಗೆ ಜಗಳ ತೆಗೆದು ಹೊಡೆ ಬಡೆ ಮಾಡಿ ಮನೆಯಿಂದ ಹೊರಗಡೆ ಹಾಕಿ ಮಾನಸಿಕ ಹಾಗೂ ದೈಹಿಕ ಕಿರುಕುಳ ನೀಡಿರುತ್ತಾರೆ ಕಾರಣ ದಿನಾಂಕ 25-05-2022 ರಂದು ಆರೋಪಿ ನಂ 1 ನೇದ್ದವನು ಚಾಸಾ ನಂ 1 ನೇದ್ದವಳಿಗೆ ಮದುವೆಯಾಗಿದ್ದು, ಮದುವೆಯಾದ ನಂತಾರ ಚಾಸಾ ನಂ 1 ನೇದ್ದವಳಿಗೆ ಆರೋಪಿ ನಂ 1 ನೇದ್ದವನು ಮನೆಯಲ್ಲಿ ಆಗಾಗ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈಯುತ್ತಾ ನೀನು ನನಗೆ ಇಷ್ಟ ಇಲ್ಲಾ ನಾನು ನಿನಗೆ ನಮ್ಮ ತಂದೆ ತಾಯಿ ಮಾತು ಕೇಳಿ ಮದುವೆ ಆಗಿದ್ದೇನೆ, ನೀನು ತವರು ಮನೆಗೆ ಹೋಗು, ನಾನು ಬೇರೆ ಮದುವೆ ಮಾಡಿಕೊಳ್ಳುತ್ತೇನೆ ಎಂಬುದಾಗಿ ಹೇಳಿದ್ದು ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ

18/7

498 (ಎ) ಹಾಗೂ ಸಂಗಡ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ... ಸಂಜ್ಞೆತೆಗೆ ಬಂದಿರುತ್ತದೆ.

ಎರಡನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ... ರಿಂದ 5 ನೆದ್ದವರಾದ ನೀವು ಅಕ್ರಮಕೂಟ ರಚಿಸಿಕೊಂಡು ಚಾ ಸಾ 1 ಇವರಿಗೆ ... ಕೈಯಿಂದ ಹೊಡೆ ಬಡೆ ಮಾಡಿ ಮನೆಯಿಂದ ಹೊರಗಡೆ ಹಾಕಿ ಮಾನಸಿಕ ಹಾಗೂ ... ನೀಡಿದ್ದು ಆ ಮೂಲಕ ಭಾ.ದಂ.ಸಂ. 323 ಸಂಗಡ 149 ರ ಅಡಿಯಲ್ಲಿ ಶಿಕ್ಷಾರ್ಹ ... ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಮೂರನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋ... ನೀವು ಅಕ್ರಮಕೂಟ ರಚಿಸಿಕೊಂಡು ಚಾ ಸಾ1 ಇವರಿಗೆ ಜಗಳ ತೆಗೆದು ಆರೋಪಿ 1 ನೆದ್ದವನು ... ಭೊಸಡಿ ನೀನು ನನಗೆ ಇಷ್ಟ ಇಲ್ಲಾ ಎಂದು ಹಾಗೂ ಚಾಸಾ 1 ರವರ ಅತ್ತೆಯಾದ ಆರೋಪಿ ... ನೆದ್ದವಳು ಹಾಗೂ ಮಾವನಾದ ಆರೋಪಿ ನಂ 3 ನೆದ್ದವನು ಭಾವನಾದ ಆರೋಪಿ ನಂ 4 ನೆ... ನೆಗೇಣಿಯಾದ ಆರೋಪಿ ನಂ 5 ನೆದ್ದವರು ಕೂಡಿ ಚಾಸಾ ನಂ 1 ನೆದ್ದವಳಿಗೆ ರಂಡಿ ಭೊಸಡಿ ನೀನು ನಮ್ಮ ಮನೆಗೆ ಸೋಸೆಯಾಗಿ ಬಂದ ಮೇಲೆ ನಮ್ಮ ಮನೆಯಲ್ಲಿ ದಿನಾಲು ಕಿರಿಕಿರಿ ಜಗಳ ಆಗುತ್ತಿದ್ದು ನಿನ್ನ ಕಾಲಗುಣ ಸರಿ ಇರುವುದಿಲ್ಲಾ ನೀನು ನಮ್ಮ ಮನೆ ಬಿಟ್ಟು ನಿಮ್ಮ ತವರು ಮನೆಗೆ ಹೋಗು ಅಂತಾ ಹೇಳಿದ್ದು ಆ ಮೂಲಕ ಭಾ.ದಂ.ಸಂ. 504 ಸಂಗಡ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕೊನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಅಕ್ರಮಕೂಟ ರಚಿಸಿಕೊಂಡು ಚಾ ಸಾ 1 ಇವರಿಗೆ ಜಗಳ ತೆಗೆದು ನೀನು ಇನ್ನು ನಮ್ಮ ಮನೆಯಲ್ಲಿ ಯಾಕೆ ಬಿದ್ದಿದ್ದಿ ನೀನು ನಮ್ಮ ಮನೆಗೆ ತಕ್ಕ ಸೋಸೆ ಅಲ್ಲಾ ನಾವು ನಮ್ಮ ಮಗನಿಗೆ ಇನ್ನೊಂದು ಬೇರೆ ಮದುವೆ ಮಾಡುತ್ತೇವೆ ನೀನು ಹಾಗೆ ನಮ್ಮ ಮನೆಯಲ್ಲಿ ಇದ್ದರೆ ನಿನಗೆ ನಾವೆಲ್ಲರೂ ಕೂಡಿ ನೀನು ಮಲಗಿದಾಗ ರಾತ್ರಿವೇಳೆ ನಿನ್ನ ಮೈ ಮೇಲೆ ಗ್ಯಾಸ ಹಾಕಿ ಮೈಗೆ ಬೆಂಕಿ ಹಚ್ಚಿ ಸುಟ್ಟು ಕೊಲೆ ಮಾಡುತ್ತೇವೆ ಅಂತಾ ಜೀವ ಬೆದರಿಕೆ ಹಾಕಿದ್ದು ಆ ಮೂಲಕ ಭಾ.ದಂ.ಸಂ. 506 ಸಂಗಡ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ದಿನಾಂಕ: 18-07-2024

ಪ್ರ.ದ...